4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಧುಗಿರಿ

ಎಸ್.ಸಿ. ನಂಃ 5033/2019

**(ದಿನಾಂಕಃ 28-09-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

ಹೆಸರುಃ ರಾಮಚಂದ್ರ ಪಿ.ಡಬ್ಲ್ಯೂ 04.
ತಂದೆಯ ಹೆಸರುಃ ತಿಮ್ಮರಾಯಪ್ಪ ಸಿ.ಡಬ್ಲ್ಯೂ 10.
ವಯಸ್ಸುಃ 57 ವರ್ಷ
ಉದ್ಯೋಗಃ ಡಾಬಾ ಕೆಲಸ.
ವಾಸಃ ಬ್ಯಾಡರಹಳ್ಳಿ.

**ಮುಖ್ಯ ವಿಚಾರಣೆಃ** ಸರ್ಕಾರಿ ಅಭಿಯೋಜಕರಿಂದಃ

ನಾನು ತಿಪ್ಪಗೊಂಡನಹಳ್ಳಿಯಲ್ಲಿರುವ ತ್ರಿದೇವ್ ಫ್ಯಾಮಿಲಿ ರೆಸ್ಟೋರೆಂಟ್‌ನ್ನು ಕಳೆದ 10-15 ವರ್ಷಗಳಿಂದ ನಡೆಸುತ್ತಿದ್ದೇನೆ. ಚಾಸಾ-11 ಅಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗ್ಗೆ 2 ವರ್ಷಗಳ ಹಿಂದೆ ಯಾರಾದರೂ ನಮ್ಮ ಡಾಬಾಕ್ಕೆ ಬಂದಿರಲಿಲ್ಲ. ಅವರ ಪೈಕಿ ನ್ಯಾಯಾಲಯದಲ್ಲಿರುವ ಯಾವುದೇ ವ್ಯಕ್ತಿಗಳು ಡಾಬಾಕ್ಕೆ ಬಂದಿರಲಿಲ್ಲ. ಪೋಲಿಸರು ನಮ್ಮ ಡಾಬಾಕ್ಕೆ ಬಂದವರ ಫೋಟೋಗಳನ್ನು ತೋರಿಸಿ ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಪಿಪಿ ಯವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ, ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ಈಗ್ಗೆ 2 ವರ್ಷಗಳ ಹಿಂದೆ ರಾತ್ರಿ 11-00 ಗಂಟೆ ಸುಮಾರಿಗೆ ವ್ಯಾಪಾರ ಮುಗಿಸಿ, ಊಟ ಮಾಡಿ, ಲೆಕ್ಕ ಮಾಡಿಕೊಂಡು ಮಾರನೇ ದಿನ ಡಾಬಾಗೆ ಬೇಕಾದ ಐಟಂಗಳನ್ನು ತರುವ ಬಗ್ಗೆ ಮಾತನಾಡಿಕೊಳ್ಳುತ್ತಿದ್ದಾಗ, ಮಧ್ಯರಾತ್ರಿ 12-00 ಗಂಟೆ ಸುಮಾರಿಗೆ ಒಂದು ಕ್ವಾಲೀಸ್ ಹಾಗೂ ಒಂದು ಸ್ವಿಫ್ಟ್ ಕಾರ್ ಬಂತು ಎಂದರೆ ಸರಿಯಲ್ಲ. ಕ್ವಾಲೀಸ್ ಕಾರಿನಿಂದ ಸುಮಾರು 6 ಜನ ಹಾಗೂ ಸ್ವಿಫ್ಟ್ ಕಾರ್ ನಿಂದ ಇಬ್ಬರು ಇಳಿದು ಬಂದರು ಎಂದರೆ ಸರಿಯಲ್ಲ. ಆಗ ನಮ್ಮ ಬಳಿ ಊಟ ಕೇಳಿದರು ಎಂದರೆ ಸರಿಯಲ್ಲ. ನಾವು ಇಲ್ಲ ಡಾಬಾ ಕ್ಲೋಸ್ ಆಗಿದೆ ಎಂದಿದ್ದಕ್ಕೆ ದಯಮಾಡಿ ಏನಾದರೂ ಕೊಡಿ ಹೊಟ್ಟೆ ಹಸಿವಾಗಿದೆ ಸ್ವಲ್ಪ ದೂರ ಹೋಗಬೇಕು ಎಂದು ಗೋಗರೆದಿದ್ದರಿಂದ, ನಾವು ಎಲ್ಲರಿಗೂ ಉಳಿದಿದ್ದ ಬಿರಿಯಾನಿಯನ್ನು ಕೊಟ್ಟೆವು ಎಂದರೆ ಸರಿಯಲ್ಲ.

ನಂತರ, ಡಾಬಾದಲ್ಲಿ ಊಟ ಮಾಡಿ ಹೋದ 8 ಜನ ವ್ಯಕ್ತಿಗಳ ಫೋಟೋವನ್ನು ಪೋಲಿಸರು ನನಗೆ ತೋರಿಸಿದಾಗ ಅವರನ್ನು ಗುರುತಿಸಿದೆ ಎಂದರೆ ಸರಿಯಲ್ಲ. ಅನಂತರ, ಸದರಿಯವರೆಲ್ಲರೂ ಒಬ್ಬ ಮನು ಎಂಬ ವ್ಯಕ್ತಿಯನ್ನು ದಿನಾಂಕಃ 07-01-2019 ರಂದು ಮಧ್ಯರಾತ್ರಿ ಕೊರಟಗೆರೆ ಬಳಿಯ ಜೆಟ್ಟಿ ಅಗ್ರಹಾರ ಸಮೀಪ ಕೊಲೆ ಮಾಡಿದ ವಿಚಾರ ತಿಳಿಯಿತು ಎಂದರೆ ಸರಿಯಲ್ಲ.

ಸದರಿ ವಿಚಾರವಾಗಿ ದಿನಾಂಕಃ 17-01-2019 ರಂದು ನನಗೆ ಈಗ ವಿವರವಾಗಿ ಓದಿ ಹೇಳಲಾದಃ ನಂತರ *"ಹೀಗಿರುವಾಗ .............. ನುಡಿಯುತ್ತೇನ್"* ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು. ಆ ದಿನ ನಮ್ಮ ಡಾಬಾಕ್ಕೆ ಬಂದು ಊಟ ಮಾಡಿ ಹೋದ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 1 ರಿಂದ 5 ಹಾಗೂ 7, 8 ಮತ್ತು 12 ನೇ ಆರೋಪಿತರು ಎಂದರೆ ಸರಿಯಲ್ಲ.

ಆ ದಿನ ನಮ್ಮ ಡಾಬಾಕ್ಕೆ ಬಂದ ಕಾರುಗಳು ಈ ದಿನ ನ್ಯಾಯಾಲಯದ ಹೊರಾಂಗಣದಲ್ಲಿರುವ ಕ್ವಾಲೀಸ್ ಹಾಗೂ ಸ್ವಿಫ್ಟ್ ಕಾರುಗಳು ಎಂದರೆ ಸರಿಯಲ್ಲ. ಸದರಿ ಕಾರುಗಳನ್ನು ಸಾಂಕೇತಿಕವಾಗಿ ಮು.ಮಾ-5 ಮತ್ತು 6 ಎಂದು ಗುರುತಿಸಲಾಯಿತು. ಸದರಿ ಎಲ್ಲಾ ವಿಚಾರಗಳು ನನಗೆ ಸ್ವತಃ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ಟಿ.ಎಸ್.ಕೆ ವಕೀಲರಿಂದಃಏನೂ ಇಲ್ಲ.**

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓದಿ ಹೇ ಕೇ ಸರಿ ಇದೆ

4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಧುಗಿರಿ